ಸಂಗತಿಗಳನ್ನು ಸಾಮಾನ್ಯ ಜನರಿಗೆ ತಲುಪಿಸಲು ಇರುವ ಬಾಬತ್ತೇ ಬಲು ಕಷ್ಟದ್ದು.

ವಿಚಿತ್ರ ಎಂದರೆ ಇವುಗಳ ಪ್ರಾಮುಖ್ಯತೆ ತಿಳಿಯುವ ಮೊದಲು ನಾನು ಕೊಂದ ಹಾವುಗಳಿಗೆ ಲೆಕ್ಕವೇ ಇಲ್ಲ. ನಮ್ಮಪ್ಪ ಚೇಣಿ ಹಿಡಿದ ತೆಂಗಿನ ತೋಟಗಳು ಗೇರಮರಡಿ ಎಂಬ ಹಳ್ಳಿಯ ಆಚೆ ಇದ್ದವು. ಅದೊಂದು ಕುರುಚಲು ಕಾಡಿನ ಗುಡ್ಡಪ್ರದೇಶ. ಅಲ್ಲೇ ನಮ್ಮ ವಾಸದ ಸ್ಥಳವಿತ್ತು. ತೀರಾ ನಿರ್ಜನ ಪ್ರದೇಶ. ಕೂಗಿಕೊಂಡರೂ ಯಾರೂ ಕೇಳದ ಸ್ಥಳ. ಇಲ್ಲಿ ತಿಳಿಯಾಗಿ ಹರಿವ ಹಳ್ಳ ಅದಕ್ಕೆ ಲಗತ್ತಾಗಿ ಕೆರೆಯೊಂದು ಚಾಚಿ ಮಲಗಿತ್ತು. ಇದರ ನಡುವೆ ಅಪ್ಪ ಸೋಗೆಯ ಗುಡಿಸಲೊಂದು ಕಟ್ಟಿದ್ದರು. ರಜಾ ದಿನಗಳಲ್ಲಿ ನಮಗದೇ ದುಡಿಯುವ ತಾಣವಾಗಿತ್ತು. ಮನೆಯಲ್ಲಿ ವಿಪರೀತ ಕೋಳಿ ಸಾಕಿದ್ದ ಕಾರಣಕ್ಕೆ ಹಾವುಗಳ ಒಡನಾಟ ಮತ್ತು ಓಡಾಟ ತುಸು ಹೆಚ್ಚೇ ಇತ್ತು. ಇವುಗಳ ಉಪಟಳವನ್ನು ಕೊಂದು ಬಗೆಹರಿಸಿಕೊಳ್ಳುವುದೇ ನಮಗೆ ತಿಳಿದಿದ್ದ ಏಕೈಕ ಸರಳ ಉಪಾಯ. ಅದೆಲ್ಲಾ ನೆನಸಿಕೊಂಡರೆ ಈಗ ಖಂಡಿತಾ ಪಶ್ಚಾತ್ತಾಪವಾಗುತ್ತದೆ.

ತೀರ್ಥಹಳ್ಳಿಯ ಗೆಳೆಯರ ಬಳಗ ಪರಿಚಯವಾದ ನಂತರ ನನಗೆ ಹಾವುಗಳ ಪಟ ತೆಗೆಯುವ ಅಭಿರುಚಿ ಬೆಳೆಯಿತು. ಹಾವುಗಳ ಇರುವಿಕೆ ಈ ನಿಸರ್ಗಕ್ಕೆ ಎಷ್ಟು ಅತ್ಯಗತ್ಯ ಎಂಬ ಅರಿವು ಪ್ರಾಪ್ತವಾಯಿತು. ಜೊತೆಗೆ ತೀರ್ಥಹಳ್ಳಿಯ ಉರಗತಜ್ಞ ಮಾರುತಿ ಮೇಷ್ಟ್ರು ಕಾಳಿಂಗ ಸರ್ಪ ಇಲ್ಲವೇ ನಾಗರ ಹಾವು ಹಿಡಿದಾಗ ನಮ್ಮನ್ನು ಕರೆಯುವುದು; ನಾವು ಓಡೋಡಿ ಹೋಗಿ ಅವುಗಳ ಚಿತ್ರ ತೆಗೆಯುವುದು ಒಂದು ಪರಿಪಾಟವೇ ಆಗಿಹೋಯಿತು.

ಒಂದು ದಿನ ಅತಿ ದೊಡ್ಡ ಕಾಳಿಂಗ ಸರ್ಪ ಹಿಡಿದ ಸುದ್ದಿ ತಿಳಿದಾಗ ಬೆಳ್ಳಂಬೆಳಗ್ಗೆ ಎದ್ದು ಅವಸರದಿಂದ ತೀರ್ಥಹಳ್ಳಿಗೆ ಓಡಿದೆವು. ಅದೋ ಭಯಂಕರ ಬುಸುಗುಡುವ ಗಢವ ಹಾವು. ಅದರ ಉಸಿರಾಟ ಮತ್ತು ಅಬ್ಬರವೇ ಭಯ ಹುಟ್ಟಿಸುವಂತಿತ್ತು. ಅದರ ಪಟ ತೆಗೆದ ಮೇಲೆ ಒಮ್ಮೆ ಅದರ ಮೈ ಮುಟ್ಟುವ ಮನಸ್ಸಾಯಿತು. ಆದದ್ದಾಗಲಿ ಎಂದು ಧೈರ್ಯ ಮಾಡಿ ಮಾರುತಿ ಮೇಷ್ಟ್ರು ಸುಪರ್ದಿನಲ್ಲಿ ಅದನ್ನು ಸ್ಪರ್ಶಿಸಿದಾಗ ಕಟ್ಟಿಗೆ ತುಂಡು ಹಿಡಿದಂತೆ ಭಾಸವಾಯಿತು. ಕಚ್ಚಿದರೆ ನಮ್ಮ ಗತಿಯೇನಪ್ಪ ಎಂದು ನಾವು ಯೋಚಿಸುವಂತೆ ಆ ಹಾವೂ ಕೂಡ ಈ ದುಷ್ಟರು ನನ್ನ ಕೊಂದರೆ ಏನೆಂದು ಆಲೋಚಿಸಬಹುದೇನೋ? ಹಾವಾಗಲಿ ಕಾಡು ಪ್ರಾಣಿಗಳಾಗಲಿ ನಮ್ಮ ಮೇಲೆ ದಾಳಿ ಮಾಡುವುದು ಅವುಗಳ ಜೀವಭಯದಿಂದಲೇ ಹೊರತು ನಮಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಅಲ್ಲವೇ ಅಲ್ಲ. ಮನುಷ್ಯರಿಗೆ ಒಗ್ಗಿದ ಸಣ್ಣತನ, ದುರಾಲೋಚನೆಗಳು ಇಲ್ಲದ ಈ ಜೀವಗಳು ನಿಜಕ್ಕೂ ಸೃಷ್ಟಿಯ ಕಾಣಿಕೆಗಳು.

ಹಾವಿನ ಪಟ ತೆಗೆಯುವುದು ಅಷ್ಟು ಸಲೀಸಲ್ಲ ಎನ್ನುವುದು ಮತ್ತೊಂದು ಸಂಕಷ್ಟದ ವಿಷಯ. ಚಿತ್ರ ತೆಗೆಯಲು ನಾವು ನೆಲದ ಮೇಲೆ ಸಾಷ್ಟಾಂಗ ನಮಸ್ಕಾರ ಮಾಡುವ ರೀತಿ ಮಲಗಬೇಕು. ತೀರಾ ಸಮೀಪಕ್ಕೆ ಹೋಗಿ ಕ್ಲಿಕ್ಕಿಸಬೇಕು. ಜೊತೆಗೆ ಅದು ಸುಮ್ಮನೆ ನಿಲ್ಲುವ ಜಾಯಮಾನದ್ದಲ್ಲ. ತುಂಬಾ ಹೊಯ್ದಾಟ ಮಾಡುತ್ತಿರುತ್ತದೆ. ಅದರ ಕಣ್ಣನ್ನೇ ಫೋಕಸ್ ಮಾಡಿ ನಾಲಿಗೆ ಚಾಚುವುದನ್ನೇ ಕಾಯಬೇಕು. ಹೀಗೆ ಮಾಡುವಾಗ ಬಹಳಷ್ಟು ಸಲ ಹಾವು ನಮ್ಮೆಡೆಗೆ

